2. ನಿಯಮಾನುಸಾರ ಸಾರ್ವಜನಿಕರ : ಜನಪ್ರತಿನಿಧಿಗಳ ಅಭಿಪ್ರಾಯ ಕೇಳುವ ಅವಶ್ಯಕತೆ, ಕ್ರಮ ಇರುವುದಿಲ್ಲ.

ಈ) 1. ಸರ್ಕಾರದ ಗಮನಕ್ಕೆ ಬಂದಿಲ್ಲ.

2. ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಟ್ರಾನ್ಸ್‌ಫಾರ್ಮರ್‌ಗಳ ಟಿ.ಸಿ. ಸೆಟ್‌ಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 723 (1292)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್, ಟಿ.ಸಿ.ಸೆಟ್, 4 ಎ.ಸಿ.ಎಸ್.ಆರ್. ಅಥವಾ 2 ಎ.ಸಿ.ಎಸ್.ಆರ್. ತಂತಿಗಳನ್ನು ಸರಬರಾಜು ಮಾಡದೇ ಇರುವುದು ಗಮನಕ್ಕೆ ಬಂದಿದೆಯೇ?

ಆ) ಶಿಕಾರಿಪುರ ತಾಲ್ಲೂಕಿಗೆ ಬೇಕಾದ ಟ್ರಾನ್ಸ್‌ಫಾರ್ಮರ್, ಟಿ.ಸಿ.ಸೆಟ್, 4 ಎ.ಸಿ.ಎಸ್.ಆರ್. 2 ಎ.ಸಿ.ಎಸ್.ಆರ್. ಎಷ್ಟು ಪ್ರಮಾಣದಲ್ಲಿ ಅಗತ್ಯ ಇದೆ, ಇವುಗಳನ್ನು ಯಾವಾಗ ಸರಬರಾಜು ಮಾಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):-

ಅ) ಶಿಕಾರಿಪುರ ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್ ಹಾಗೂ ಎ.ಸಿ.ಎಸ್.ಆರ್. ತಂತಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಕಳೆದ 3 ತಿಂಗಳಲ್ಲಿ ಅಂದರೆ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಕೆಳಕಂಡ ಸಾಮಗ್ರಿಗಳನ್ನು ಶಿಕಾರಿಪುರ ತಾಲ್ಲೂಕಿಗೆ ಸರಬರಾಜು ಮಾಡಲಾಗಿದೆ.

1. 25 ಕೆ.ವಿ.ಎ. ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್	-	5 ಸಂಖ್ಯೆ.
2. 63 ಕೆ.ವಿ.ಎ. ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್	-	12 ಸಂಖ್ಯೆ.
3. 100 ಕೆ.ವಿ.ಎ. ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್	-	8 ಸಂಖ್ಯೆ.
4. 250 ಕೆ.ವಿ.ಎ. ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್	-	1 ಸಂಖ್ಯೆ.
5. 4 ಎ.ಸಿ.ಎಸ್.ಆರ್. ತಂತಿ		- 11.25 ಕಿ.ಮೀ.
6. 2 ಎ.ಸಿ.ಎಸ್.ಆರ್. ತಂತಿ		- 19.00 ಕಿ.ಮೀ.

ಆ) ಶಿಕಾರಿಪುರ ತಾಲ್ಲೂಕಿಗೆ ಅಗತ್ಯವಿರುವ ಟ್ರಾನ್ಸ್‌ಫಾರ್ಮರ್, 4 ಎ.ಸಿ.ಎಸ್.ಆರ್. ಮತ್ತು 2 ಎ.ಸಿ.ಎಸ್.ಆರ್. ತಂತಿಗಳ ವಿವರಗಳು ಕೆಳಕಂಡಂತಿವೆ.

1. 25 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ - 19 ಸಂಖ್ಯೆ

2. 63 ಕೆ.ವಿ.ಎ. ಟ್ರಾನ್ಸ್‌ಫಾರ್ಮರ್ - 14 ಸಂಖ್ಯೆ

3. 4 ಎ.ಸಿ.ಎಸ್.ಆರ್. ತಂತಿ -42.6 ಕಿ.ಮೀ.

4. 2ಎ.ಸಿ.ಎಸ್.ಆರ್. ತಂತಿ -70.6 ಕಿ.ಮೀ.

ಮಂಡಳಿಯ ಹಣಕಾಸು ಪರಿಸ್ಥಿತಿಯನ್ನು ಅವಲಂಭಿಸಿ ಮುಂಬರುವ ತಿಂಗಳುಗಳಲ್ಲಿ ಟ್ರಾನ್ಸ್‌ಫಾರ್ಮರ್ ಹಾಗೂ ಎ.ಸಿ.ಎಸ್.ಆರ್. ತಂತಿಗಳನ್ನು ಶಿಕಾರಿಪುರ ತಾಲ್ಲೂಕಿಗೆ ಸರಬರಾಜು ಮಾಡಲಾಗುವುದು.

ವಿಷಯ:- ನೋಂದಣಿಯಾಗಿರುವ ಪಿ.ಸಿ.ಆರ್. ಕೇಸುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 648 (1290)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೋಂದಣಿಯಾಗಿರುವ ಪಿ.ಸಿ.ಆರ್. ಕೇಸುಗಳ ಸಂಖ್ಯೆ : ಎಷ್ಟು ಈಗಾಗಲೇ ನಿಜವಾದ ಆರೋಪಿಗಳೆಂದು ದೃಢಪಟ್ಟು ಇತ್ಯರ್ಥವಾಗಿರುವ ಕೇಸುಗಳ ಸಂಖ್ಯೆ ಎಷ್ಟು?

ಆ) ಪಿ.ಸಿ.ಆರ್. ಕೇಸುಗಳಲ್ಲಿ ನಿರಪರಾಧಿಗಳು ಬಳಲುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಪಿ.ಸಿ.ಆರ್. ಕೇಸುಗಳನ್ನು ತೆಗೆದು ಹಾಕುವ ಪ್ರಸ್ತಾವವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) 1-1-93ರಿಂದ 31-5-96ರ ಮೇ ಅಂತ್ಯದವರೆಗೆ

ದಾಖಲಾದ ಮೊಕದ್ದಮೆಗಳು 1269

2 ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆ ಆಗಿರುತ್ತದೆ.

ಆ) ಇಲ್ಲ.

ಇ) ಇಲ್ಲ.

ವಿಷಯ:- ಹಾರಂಗಿ ಆಣೆಕಟ್ಟಿನಲ್ಲಿ ಮುಳುಗಡೆಯಾದವರಿಗೆ ಪರಿಹಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 644 (1022)